ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)
ಮೇಲ್ಕಂಡ ಪ್ರಸ್ತಾವಗಳನ್ನು ಸರ್ಕಾರವು ಒಪ್ಪಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1284(1348)**
ಸದಸ್ಯರ ಹೆಸರು	**ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)**
ಉತ್ತರಿಸಬೇಕಾದ ಸಚಿವರು	**ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

ಅ) ರಾಜ್ಯದಲ್ಲಿ ಸರ್ಕಾರ ಮಕ್ಕಳ ಅಭಿವೃದ್ಧಿ ಬಗ್ಗೆ ಕೈಗೊಂಡ ಕ್ರಮಗಳೇನು(ವಿವರ ನೀಡುವುದು)?

1 ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ 0–6ವರ್ಷದ ಮಕ್ಕಳಿಗೆ ಅಂಗನವಾಡಿ ಕೇಂದ್ರಗಳಲ್ಲಿ ಸೇವೆಗಳನ್ನು ಒದಗಿಸಲಾಗುತ್ತಿದೆ
2 ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿಗಳು
3 ಭಾಗ್ಯಲಕ್ಷ್ಮಿ ಯೋಜನೆ
4 ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು
5 ಬಾಲಭವನ, ವೀರಶಕ್ತಿ ಮತ್ತು ಹಾಜರಾತಿ ಇದ್ಯಾರ್ಥಿ ವೇತನ
6 ಅನಾಥ ಮಕ್ಕಳಿಗೆ ನಿರ್ಗತಿಕ ಮಕ್ಕಳ ಕುಟೀರ
7 ಶಿಶು ಪಾಲನಾ ಕೇಂದ್ರ.
8 ಬೀದಿ ಮಕ್ಕಳಿಗಾಗಿ ಸಮಗ್ರ ಯೋಜನೆ
9 ದುಡಿಯುವ ಮಕ್ಕಳ ಅಗತ್ಯತೆಗಾಗಿ ರಕ್ಷಣೆ ಮತ್ತು ಪಾಲನೆ
10 ಮಹಿಳೆಯರ ಮತ್ತು ಮಕ್ಕಳ ಸಾಗಣೆ ತಡೆಗಟ್ಟಲು ಸ್ವಯಂ ಸೇವಾ ಸಂಸ್ಥೆಗಳಿಗೆ ಭಾರತ ಸರ್ಕಾರದ ಆರ್ಥಿಕ ನೇರವು

ಆ) ರಾಜ್ಯದಲ್ಲಿರುವ ಮಕ್ಕಳ ಸಂಖ್ಯೆ ಎಷ್ಟು? ಅದರಲ್ಲಿ ಬಡತನ ರೇಖೆಗಿಂತ ಕೆಳಗಿರುವ ಮಕ್ಕಳ ಸಂಖ್ಯೆ ಎಷ್ಟು? ಇವರ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

2001ನೇ ಜನಗಣತಿಯ ಪ್ರಕಾರ ರಾಜ್ಯದಲ್ಲಿ 0–06ವರ್ಷದ ಮಕ್ಕಳ ಸಂಖ್ಯೆ 68,26,168 ಇದ್ದು, ಬಡತನ ರೇಖೆಗಿಂತ ಕೆಳಗಿರುವ 32 27ಲಕ್ಷ ಮಕ್ಕಳನ್ನು ಐ ಸಿ ಡಿ ಎಸ್ ಫಲಾನುಭವಿಗಳಾಗಿದ್ದು, ಅಂಗನವಾಡಿ ಕೇಂದ್ರಗಳಲ್ಲಿ ದಾಖಲು ಮಾಡಿಕೊಳ್ಳಲಾಗಿದೆ ಮಕ್ಕಳ ಅಭಿವೃದ್ಧಿಗಾಗಿ ಈ ಕೆಳಕಂಡ ಕ್ರಮಗಳನ್ನು ಮುಖ್ಯವಾಗಿ ಕೈಗೊಳ್ಳಲಾಗಿದೆ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚಿಸುವುದು

ಶಿಶು ಮರಣ ಕಡಿಮೆ ಮಾಡುವುದು, ಔಪಚಾರಿಕ ಶಿಕ್ಷಣಕ್ಕೆ ಮಕ್ಕಳನ್ನು ಸಿದ್ಧಗೊಳಿಸುವುದು, ಮಗುವಿನ ಸರ್ವತೋನ್ಮುಖ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ ಏಪ್ರಿಲ್ 2006ರಿಂದ ಫೆಬ್ರವರಿ 2007 ಅಂತ್ಯದವರೆವಿಗೆ ಬಿ ಪಿ ಎಲ್ ಕುಟುಂಬದಲ್ಲಿ ಒಟ್ಟು 276718 ಮಕ್ಕಳಿರುತ್ತಾರೆ ಭಾಗ್ಯಲಕ್ಷ್ಮಿ ಯೋಜನೆಯಡಿ 1/4/2006ರಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ 119209 ಹೆಣ್ಣು ಮಕ್ಕಳನ್ನು ಗುರುತಿಸಿದ್ದು, ಈ ಮಕ್ಕಳ ಹೆಸರಿನಲ್ಲಿ ಪಾಲುದಾರು ಹಣಕಾಸು ಸಂಸ್ಥೆಯಲ್ಲಿ ರೂ 10,000ಗಳ ಠೇವಣಿ ಹೂಡಲಾಗುವುದು 18ವರ್ಷಗಳು ಪೂರೈಸಿದ ನಂತರ ಬಡ್ಡಿ ಸಮೇತ ಹೆಣ್ಣು ಮಗುವಿಗೆ ನೀಡಲಾಗುವುದು

ಶಿಶು ಪಾಲನಾ ಕೇಂದ್ರಗಳಲ್ಲಿ 0–3ವರ್ಷದ ಮಕ್ಕಳನ್ನು ತಾಯಂದಿರು ಕೆಲಸಕ್ಕೆ ಹೋಗಿರುವ ಸಮಯದಲ್ಲಿ ಪಾಲನೆ ಮಾಡಲಾಗುತ್ತದೆ

ನಿರ್ಗತಿಕ ಮಕ್ಕಳ ಕುಟೀರಗಳಲ್ಲಿ ಮಕ್ಕಳನ್ನು ದಾಖಲುಮಾಡಿ ಅವರ ರಕ್ಷಣೆ, ಪೋಷಣೆ, ವಿದ್ಯಾಭ್ಯಾಸ, ಆಹಾರ ಮತ್ತು ತರಬೇತಿ ನೀಡಲಾಗುತ್ತಿದೆ

ಇ) ಅಲ್ಪ ವಯಸ್ಸಿನ ದುಡಿಯುವ ಮಕ್ಕಳಿಗೆ ಸರ್ಕಾರ ಪುನರ್‌ವಸತಿ ಕಲ್ಪಿಸಿದೆಯೇ (ವಿವರ ನೀಡುವುದು)?

ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರಾಗುವ ಮಕ್ಕಳ ತಂದೆ–ತಾಯಿ/ಪೋಷಕರನ್ನು ಪತ್ತೆ ಹಚ್ಚಿ ಅವರ ವಶಕ್ಕೆ ಬಿಡಲಾಗುತ್ತದೆ ಪೋಷಕರು ಪತ್ತೆಯಾಗದ ಸಂದರ್ಭಗಳಲ್ಲಿ ಮಕ್ಕಳನ್ನು ಬಾಲಮಂದಿರಗಳಲ್ಲಿ, ದಾಖಲುಗೊಳಿಸಲಾಗುತ್ತವೆ ರಕ್ಷಣೆ, ಪೋಷಣೆ, ಆಹಾರ, ವೈದ್ಯಕೀಯ ತಪಾಸಣೆ, ವಿದ್ಯಾಭ್ಯಾಸ ಹಾಗೂ ತರಬೇತಿಯನ್ನು ನೀಡಲಾಗುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನ ಸಂಖ್ಯ	**1285(1772)**
ಸದಸ್ಯರ ಹೆಸರು	**ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)**
ಉತ್ತರಿಸಬೇಕಾದ ಸಚಿವರು	**ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)**

ಅ) ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಸ್ತುತ ವಿತರಿಸಲಾಗಿರುವ ವಿವಿಧ ವರ್ಗವಾರು ಪಡಿತರ ಕಾರ್ಡ್‌ಗಳೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು),

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ವಿತರಿಸಲಾಗಿರುವ ವಿವಿಧ ವರ್ಗವಾರು ತಾತ್ಕಾಲಿಕ ಕೂಪನ್‌ಗಳ ವಿವರ ಈ ಕೆಳಕಂಡಂತಿದೆ –